10	ನಾಗರಬಾವಿ	1.00
11	ಮಲ್ಲಸಂದ್ರ ಕೆರೆ	1.00
12	ರಮಾಪುರ	1.00
13	ವಾಟದ ಹೊಸಹಳ್ಳಿ	1.00
14	ಮಲ್ಲೇನಹಳ್ಳಿ	0.50
15	ಲಕ್ಕಸಂದ್ರ	0.75
16	ಪೋತೇನಹಳ್ಳಿ	0.75
17	ಕಾಮಗಾನಹಳ್ಳಿ	0.75
18	ಚೋಳಶೆಟ್ಟಿಹಳ್ಳಿ	0.50
19	ಬಾಲರೆಡ್ಡಿಹಳ್ಳಿ	1.00
20	ಕಾಮರೆಡ್ಡಿಹಳ್ಳಿ	1.00
	ಒಟ್ಟು	**29.35**
	ಒಟ್ಟು ಮೊತ್ತ	**55.61**

267 (787) – ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) – ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನಲ್ಲಿ ಅನಧಿಕೃತವಾಗಿ ಕಂದಾಯ ಭೂಮಿಯನ್ನು ರೈತಾಪಿ ವರ್ಗದವರು ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಎಷ್ಟು ವರ್ಷಗಳಿಂದ ಈ ರೈತರುಗಳು ಭೂಮಿಯನ್ನು ಮಾಡುತ್ತಾ ಬಂದಿರುತ್ತಾರೆ ;

ಇ) ಈ ಭೂಮಿಗಳನ್ನು ರೈತರಿಗೆ ನೀಡುವಲ್ಲಿ ಸರ್ಕಾರವು ಅನುಸರಿಸುತ್ತಿರುವ ನಿಯಮಗಳೇನು ;

ಈ) 2006ನೇ ಸಾಲಿನಲ್ಲಿ ಸರ್ಕಾರಕ್ಕೆ ಸ್ಟ್ಯಾಂಪ್ ಶುಲ್ಕದಿಂದ ಬಂದ ಆದಾಯವೆಷ್ಟು ಹಾಗೂ ಈ ಆದಾಯವನ್ನು ಯಾವ ಯಾವ ತಾಲ್ಲೂಕುಗಳ ಅಭಿವೃದ್ಧಿಗೆ ಎಷ್ಟೆಷ್ಟು ಪ್ರಮಾಣದ ಹಣವನ್ನು ವಿತರಿಸಲಾಗಿದೆ (ವಿವರವಾರು ಒದಗಿಸುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)–

ಅ) ಹೌದು ಬಂದಿದೆ.

ಆ) ಈ ರೈತರು ಸುಮಾರು 20–25 ವರ್ಷಗಳಿಂದ ಉಳುಮೆ ಮಾಡುತ್ತಿರುತ್ತಾರೆ.

ಇ) ಈ ಜಮೀನುಗಳನ್ನು ರೈತರಿಗೆ ನೀಡಲು ಕರ್ನಾಟಕ ಭೂ ಕಂದಾಯ ಅಧಿನಿಯಮ 1966ರ ಕಲಂ 94ಎ ಮತ್ತು 94ಬಿ ಅಡಿಯಲ್ಲಿ ಬಗರ್ ಹುಕುಂ ಸಮಿತಿ ಮುಂದೆ ಮಂಡಿಸಿ, ಅನುಮೋದನೆ ಪಡೆದು ನಿಯಮಾನುಸಾರ ಮಂಜೂರಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ರಾಜ್ಯದಲ್ಲಿ 2006ನೇ ಸಾಲಿನಲ್ಲಿ ನ್ಯಾಯಿಕೇತರ ಮುದ್ರಾಂಕ ಶುಲ್ಕದಿಂದ ಜನವರಿ ಮಾಹೆಯಿಂದ ಡಿಸೆಂಬರ್ ಮಾಹೆವರೆಗೆ ಒಟ್ಟು ರೂ.2799.63 ಕೋಟಿಗಳು ಸಂಗ್ರಹವಾಗಿರುತ್ತದೆ. ಹಾಗೂ ಕೋಲಾರ ಜಿಲ್ಲೆಯಲ್ಲಿ ಸದರಿ ಸಾಲಿನಲ್ಲಿ ಒಟ್ಟು ರೂ.29.73 ಕೋಟಿಗಳು ಸಂಗ್ರಹವಾಗಿರುತ್ತದೆ. ಈ ಅವಧಿಯಲ್ಲಿ ಗೌರಿಬಿದನೂರು ಉಪನೋಂದಣಿ ಕಛೇರಿಯಲ್ಲಿ ಒಟ್ಟು ರೂ.2.38 ಕೋಟಿಗಳು ಸಂಗ್ರಹವಾಗಿರುತ್ತದೆ.

ಸದರಿ ಆದಾಯದಲ್ಲಿ ಯಾವುದೇ ತಾಲ್ಲೂಕು ಪಂಚಾಯಿತಿಗಳಿಗೆ ಹಣ ಬಿಡುಗಡೆ ಮಾಡಿರುವುದಿಲ್ಲ.

268 (788) – ಶ್ರೀ ಶಿವಶಂಕರ್‌ರೆಡ್ಡಿ ಎನ್.ಹೆಚ್. (ಗೌರಿಬಿದನೂರು) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆ, ಗೌರಿಬಿದನೂರು ತಾಲ್ಲೂಕಿನಲ್ಲಿ ಹೊಸದಾಗಿ ಕೈಗಾರಿಕಾ ಪ್ರದೇಶಗಳನ್ನು ಕೆ.ಐ.ಎ.ಡಿ.ಬಿ. ವತಿಯಿಂದ ಸ್ಥಾಪಿಸಲು ಉದ್ದೇಶಿಸಲಾಗಿದೆಯೇ ;

ಆ) ಇದಕ್ಕೆ ವ್ಯಯವಾಗುವ ಹಣವೆಷ್ಟು ;

ಇ) ಈ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸಲು ಯಾವ ಯಾವ ರೈತರಿಗೆ ಎಷ್ಟೆಷ್ಟು ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ; (ವಿವರಗಳನ್ನು ಒದಗಿಸುವುದು) ;

ಈ) ರೈತರಿಗೆ ಎಕರೆವಾರು ಪರಿಹಾರ ನೀಡುತ್ತಿರುವ ಮೊತ್ತವೆಷ್ಟು ;